

‘ಸಾರ್, ಹೀಗೆ ಮಿಷನ್ ಹಾಕಿದರೆ ನಮ್ಮ ಮಗುವಿಗೆ ಚೆಂದವೇ? ಇತರರು ಹೀಯಾಳಿಸುವುದಿಲ್ಲವೇ?’ ಎನ್ನುವುದು ಮೊದಲ ಪ್ರಶ್ನೆ. ಹೀಗೆ ಪ್ರಶ್ನೆ ಕೇಳುವ ಅಮ್ಮಂದಿರಿಗೆ ನಮ್ಮದು ಒಂದೇ ಉತ್ತರ: ‘ನೋಡಮ್ಮಾ, ನೀವು ಇತರರಿಗಾಗಿ ಯಂತ್ರ ಹಾಕಿಸುತ್ತಿದ್ದೀರಾ? ಇಲ್ಲವಲ್ಲ, ಅದು ನಿಮ್ಮ ಮಗುವಿಗೆ ಅತ್ಯಗತ್ಯ. ಮಗುವಿನ ಏಳಿಗೆ ನಿಮಗೆ ನಮಗೆ ಮುಖ್ಯ ಅಲ್ಲವೇ? ಈಗ ಹೀಗೇ ಬಿಟ್ಟರೆ ದೊಡ್ಡವಳಾದ ಮೇಲೆ ಇನ್ನೂ ಕಷ್ಟ ಅಲ್ಲವೆ? ಆಗ ನಿಮ್ಮ ನೆರವಿಗೆ ಯಾರು ಬರುತ್ತಾರೆ ಹೇಳಿ. ನಿಮಗೆ ಇನ್ನೂ ಒಂದು ವಿಷಯ ಹೇಳ್ತೇನೆ ಕೇಳಿ. ನಿಮ್ಮಂತೆ ಮೊದಲು ಮುಜುಗರ ಪಟ್ಟು ಆ ಬಳಿಕ ಯಂತ್ರವನ್ನು ಹಾಕಿಸಿಕೊಂಡವರು ಬಹಳಷ್ಟು ಜನ ಇದ್ದಾರೆ.’

ಸಾಮಾನ್ಯವಾಗಿ ಎಲ್ಲರೂ ಕೇಳುವ ಎರಡನೇ ಪ್ರಶ್ನೆ– ಸಿಕ್ಕಾಪಟ್ಟೆ ದುಡ್ಡು ಖರ್ಚಾಗುತ್ತಾ.. ಎನ್ನುವುದು. ಅದಕ್ಕೂ ನಾವು ಸಮಾಧಾನ ಹೇಳಬೇಕು. ಕಿವಿಗೆ ಜೋಡಿಸುವ ಯಂತ್ರಗಳಲ್ಲೂ ಹಲವಾರು ವಿಧಗಳಿವೆ. ಅವುಗಳ ವಿಧದ ಮೇಲೆ ದುಡ್ಡು ಹೆಚ್ಚು ಕಡಿಮೆ ಆಗುತ್ತದೆ. ಜೇಬಿನಲ್ಲಿ ಇಟ್ಟುಕೊಂಡು ಸ್ಪೀಕರನ್ನು ಮಾತ್ರ ಕಿವಿಗೆ ಹಾಕಿಕೊಳ್ಳುವಂತದ್ದು ಇದೆ. ಅದನ್ನು ಬಾಡಿಲೆವಲ್ ಹಿಯರಿಂಗ್ ಏಡ್ ಎನ್ನುತ್ತೇವೆ. ಹಾಗೆಯೇ ಕಿವಿಯ ಹಿಂಭಾಗದಿಂದ ಧರಿಸುವ ಮಿಷನ್, ಕಿವಿಯ ಒಳ ಭಾಗಕ್ಕೇ ಹಾಕಬಹುದಾದ ಹಿಯರಿಂಗ್ ಏಡ್ – ಹೀಗೆ ಹಲವು ವಿಧದ ಯಂತ್ರಗಳಿವೆ. ಮಗುವಿನ ಭವಿಷ್ಯ ಗಮನಿಸಬೇಕೆಂದರೆ ಹಣ ಹೆಚ್ಚೇನೂ ಆಗುವುದಿಲ್ಲ.

ಇನ್ನು ಕೆಲವರಿದ್ದಾರೆ. ಕಿವಿಗೆ ಯಂತ್ರ ಹಾಕಿಸುವುದಕ್ಕೆ ಒಪ್ಪಿದ ತಕ್ಷಣ ಅವರಿಗೆ ಸಮಸ್ಯೆಗಳೆಲ್ಲ ಪರಿಹಾರ ಆದ ಹಾಗೆಯೇ. ‘ಡಾಕ್ಟರ್ ಈಗಲೇ ಮಿಷನ್ ಹಾಕಿಬಿಡಿ. ನಾವು ಹೊರಡುತ್ತೇವೆ. ಮಿಷನ್ ಹಾಕಿದ ಕೂಡಲೇ ನಮ್ಮ ಮಗಳು ಕೇಳಿಸಿಕೊಳ್ಳುತ್ತಾಳೆ ಅಲ್ಲವೇ, ಮಾತನಾಡುತ್ತಾಳೆ ಅಲ್ಲವೇ?’ ಎಂದು ಉತ್ಸಾಹದಿಂದ ಕೇಳುತ್ತಾರೆ.

ಈ ರೀತಿ ಯೋಚಿಸುವ ಜನರಿಗೆ ಒಮ್ಮೆಲೆ ಉತ್ತರ ಕೊಡಲಾಗುವುದಿಲ್ಲ. ಸ್ವಲ್ಪ ನಿಧಾನಕ್ಕೆ ವಿವರವಾಗಿಯೇ ಉತ್ತರ ಕೊಡಬೇಕಾಗುತ್ತದೆ. ಏಕೆಂದರೆ, ಶ್ರವಣ ದೋಷವನ್ನು ಸರಿಪಡಿಸುವ ಕೆಲಸಕ್ಕೆ ತುಂಬ ತಾಳ್ಮೆ ಬೇಕು. ಆ ಯಂತ್ರಕ್ಕೂ ಹಲವು ಮಿತಿಗಳಿವೆ. ಪೋಷಕರು ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ. ಯಂತ್ರ ಒಂದು ಸಾಧನ. ಅದು ಶಬ್ದವನ್ನು ದ್ವಿಗುಣಗೊಳಿಸಬಲ್ಲದು ಅಷ್ಟೆ. ಮುಖ್ಯವಾಗಿ ಆಗಬೇಕಾದದ್ದು ಭಾಷೆಯನ್ನು ಕಲಿಸುವ ಪ್ರಯತ್ನ.

ಉದಾಹರಣೆಗೆ ಒಂದು ಕನ್ನಡ ಮಾತನಾಡುವ ಕುಟುಂಬ ಇದೆ ಅಂದಿಟ್ಟುಕೊಳ್ಳಿ. ಅವರ ಮುಂದೆ ಏಕಾಏಕಿ ಚೈನೀಸ್ ಅಥವಾ ಜಪಾನೀ ಭಾಷೆಗಳನ್ನು ಮಾತನಾಡಿದರೆ ಅದು ಅವರಿಗೆ ಶಬ್ದವಾಗಿ ಕೇಳಿಸುತ್ತದೆಯೇ ಹೊರತು ಈ ಶಬ್ದಗಳ ಅರ್ಥ ಗೊತ್ತಾಗುವುದಿಲ್ಲ. ಅಂದರೆ ಯಂತ್ರಕ್ಕೆ ಇರುವ ಮಿತಿ ಅವರ ಅರಿವಿಗೆ ಬರುತ್ತದೆ.

ಅಲಿಷಾಳ ಪ್ರಕರಣವನ್ನೇ ತೆಗೆದುಕೊಳ್ಳಿ. ಆ ಮಗುವಿನ ಪೋಷಕರಿಗೂ ಇಂತಹದ್ದೇ ಹಲವು ಪ್ರಶ್ನೆಗಳಿದ್ದವು. ವೈದ್ಯರು ಆಕೆಯ ಪೋಷಕರಿಗೆ ವಿವರವಾಗಿಯೇ ತಿಳಿಹೇಳಿದರು. ‘ಮಗುವಿಗೆ ಈಗಾಗಲೇ 4 ವರ್ಷಗಳಾಗಿವೆ. ಈ ನಾಲ್ಕು ವರ್ಷಗಳಲ್ಲಿ ಮಗುವು ಹಲವಾರು ಶಬ್ದಗಳನ್ನು, ಮಾತುಗಳನ್ನು, ಭಾಷೆಯನ್ನು ಕೇಳಿಸಿಕೊಂಡು, ಅರ್ಥ ಮಾಡಿಕೊಂಡು ಅನುಕರಿಸಬೇಕಾಗಿತ್ತು. ಆದರೆ ಈಗಾಗಲೇ ಆ ವರ್ಷಗಳು ಕಳೆದು ಹೋಗಿವೆ. ಅಷ್ಟೂ ವರ್ಷಗಳಲ್ಲಿನ ಕಲಿಕೆಯನ್ನು ನಾವು ಈಗ ಕಲಿಸಬೇಕಾಗಿದೆ. ಶಬ್ದ ಬಂದ ಕಡೆಗೆ ಮಗು ಈಗ ತಿರುಗುತ್ತಿದೆ ಅಷ್ಟೇ. ಆದರೆ ಆ ಶಬ್ದ ಯಾವ ವಸ್ತುವಿನದ್ದು, ಯಾವ ವ್ಯಕ್ತಿಯದ್ದು, ಯಾವ ದಿಕ್ಕಿನಲ್ಲಿ ಬರುತ್ತಿದೆ ಇತ್ಯಾದಿಯನ್ನು ಮಗು ಇನ್ನಷ್ಟೆ ಕಲಿಯಬೇಕಾಗಿದೆ. ಇದನ್ನು ನೀವು ಮಗುವಿಗೆ ಕಲಿಸಬೇಕಾಗಿದೆ. ಇದನ್ನೇ ನಾವು ಶ್ರವಣ ತರಬೇತಿ ಎನ್ನುತ್ತೇವೆ’ ಎಂದರು.

ತಾಯಿಗೆ ಮತ್ತೆ ಆತಂಕ. ‘ಸಾರ್, ನಾವು ಅದನ್ನು ಕಲಿಸಲು ಮತ್ತೆ ಎಲ್ಲಿಗೆ ಹೋಗಬೇಕು?’

‘ಅದೂ ಇಲ್ಲೇ ಇದೆಯಮ್ಮಾ ಚಿಂತೆ ಮಾಡಬೇಡ. ನಮ್ಮ ಸಂಸ್ಥೆಯಲ್ಲಿ ಇರುವ ಶ್ರವಣ ತರಬೇತಿ ಘಟಕವು ನಿಮ್ಮ ಮಗುವಿಗೆ ಈ ಸೇವೆ ನೀಡುತ್ತದೆ.